ವಿದ್ಯಾ ಇಲಾಖೆ.

ತಾರೀಖು 28ನೇ ಜನವರೀ 1887ನೇ ಇಸವಿ.

ಮೈಸೂರು ದೇಶೀ ಪರಿಕ್ಷೆ.

ಪ್ರತಿ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳಗಳಲ್ಲಿ ನಡಿಯುವ ಮೈಸೂರು ದೇಶೀ ಪರೀಕ್ಷೆಗೆ ಹೆಸರು ರಿಜಸ್ಟರಾಗಿರತಕ್ಕಂಥಾ ವಿದ್ಯಾರ್ಥಿಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ.—ಸದರೀ ಪರಿಕ್ಷೆಯು ಸ್ಯ 1887ನೇ ಇಸವಿ ಫೆಬ್ರವರಿ 21ನೇ ಸೋಮವಾರದ ದಿವಸ ಪ್ರಾತಃಕಾಲ 10 ಘಂಟೆಗೆ ಸರಿಯಾಗಿ ಆರಂಭಿಸುತ್ತದೆ.

2. ವಿದ್ಯಾರ್ಥಿಗಳು ಪ್ರತಿ ದಿವಸವು ಪರಿಕ್ಷೆಯಾಗುವಂಥ ಸ್ಥಳಗಳಲ್ಲಿ 9 ಘಂಟೆಗೆ ಸರಿಯಾಗಿ ಹಾಜರಿರತಕ್ಕದ್ದು.

ಪರಿಕ್ಷೆಯು ಇದರಡಿ ಕಂಡ ಕಾಲಕ್ರಮವಾರಿ ಆಯಾ ಅಂಶಗಳಲ್ಲಿ ನಡಿಸಲ್ಪಡುವದು.

	ಮೈಸೂರು ದೇಶೀ ಪರಿಕ್ಷೆ.		ಉಪಾಧ್ಯಾಯರ ಪರಿಕ್ಷೆ.	
ದಿವಸ.	ಘಂಟೆ.	ಅಂಶಗಳು.	ಘಂಟೆ.	ಅಂಶಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ.	ಭಾಷಾ ಗ್ರಂಥ, ವ್ಯಾಕರಣ (ಅವಶ್ಯಕ ಭಾಷೆ.)	10ರಿಂದ 1ರವರಿಗೆ	ಪದ್ಯಕಾವ್ಯ ವಾಕ್ಯವಿಭಜನೆ.
	2 ,, 5 ,,	ಡಿಟ್ಟೋ ಡಿಟ್ಟೋ (ಎರಡನೇ ಭಾಷೆ.)	2 ,, 4 ,,	ವ್ಯಾಕರಣ.
			4 ,, 5 ,,	ವಾಕ್ಸರಚನೆ.
ಎರಡನೇ ದಿವಸ.	10ರಿಂದ 11ರವರಿಗೆ.	ಬರವಣಿಗೆ ಅಕ್ಷರ ಸಂಯೋಜನ (ಅವಶ್ಯಕ ಭಾಷೆ)	10ರಿಂದ 1ರವರಿಗೆ	ಚರಿತ್ರೆ.
	11 ,, 1 ,,	ಚರಿತ್ರೆ	2 ,, 4 ,,	ರೇಖಾಗಣಿತ.
	2 ,, 5 ,,	ಭೂಗೋಳ. ಭೂಪಠನಕ್ಷೆಬರಿಯುವಿಕೆ		
ಮೂರನೇ ದಿವಸ.	10ರಿಂದ 12ರವರಿಗೆ	ಅಂಕಾಗಣಿತ	10ರಿಂದ 1ರವರಿಗೆ	ಅಂಕಾಗಣಿತ.
	12ರಿಂದ 1 ,,	ಬರವಣಿಗೆ ಅಕ್ಷರಸಂಯೋಜನ (ಎರಡನೇ ಭಾಷೆ)	2 ,, 4 ,,	ಬೀಜಗಣಿತ.
	2 ,, 3. 30	ವ್ಯವಸಾಯಬೋಧಿನಿ.		
	3. 30. 5 ,,	ಆರೋಗ್ಯಬೋಧಿನಿ.		
ನಾಲ್ಕನೇ ದಿವಸ.	10ರಿಂದ11-30ರವರಿಗೆ	ಕ್ಷೇತ್ರಗಣಿ.	10ರಿಂದ 1ರವರಿಗೆ	ಭೂಗೋಳ
	11. 30 ,, 1	ಭಾಷಾಂತ್ರ.	2 ,, 5 ,,	ಶಾಸ್ತ್ರ ಪಾಠ.
ಐದನೇ ದಿವಸ.	..	..	10ರಿಂದ 1ರವರಿಗೆ	ಪಾಠಶಾಲೆಯನ್ನು ನಡಿಸುವ ಕ್ರಮ.

ಇದರಡಿ ನಮೂದಿಸಲ್ಪಟ್ಟ ಅಂಶಗೆಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

1. ಪರಿಕ್ಷೆಯು ಆರಂಭಿಸುವದಕ್ಕೆ ಕ್ಲುಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವವರಿಗೂ ಪರಿಕ್ಷೆಯಾಗುವ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲ ಮತ್ತು ಅಂಥ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ವಿದ್ಯಾರ್ಥಿಗೆಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

2. ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷೆ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಃ ಪ್ರವೇಸಿಸಲು ಯಾವ ವಿದ್ಯಾರ್ಥಿಗೂ ಅವಕಾಶ ವುಂಟಾಗಲಾರದು. ಅಲ್ಲದೆ ತನ್ನ ವೈತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟು ವಿನಹ ಪರೀಕ್ಷೇ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

3. ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನಾವ ವಿಧವಿಂದಲಾದರು ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಟಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ಸಂಗತಿಯು ಡೈರೆಕ್ಟರ್ ಸಾಹಬರವರಿಗೆ ರಿಪೋರ್ಟುಮಾಡಲ್ಪಡುವದು.

4. ಪರೀಕ್ಷೇ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ ರೂಲರುಗಳನ್ನಾಗಲೀ ಪುಸ್ತಕಗಳನ್ನಾಗಲಿ ಬರವ ಕಾಗದಗಳನ್ನಾಗಲಿ ಅಥವಾ ಇನ್ಯಾವ ವಿಧವಾವ ಕಾಗದಪತ್ರವನ್ನಾಗಲಿ ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗಗೂ ಯಾವ ಸಂದರ್ಭದಲ್ಲಿಯೂ ಅವಕಾಶಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವಲ್ಲಿಯಾಗಲಿ, ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವಲ್ಲಿಯಾಗಲೀ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೇ ಸದರೀ ಸಡವಳಿತವು ಡೈರೆಕ್ಟರ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

5. ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ಟಿಂಡೆಂಟರು ಕಾಗದಗಳನ್ನು ತೆಗದುಕೊಳ್ಳುವವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರು ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

6. ವಿದ್ಯಾರ್ಥಿಯು ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೆ ಕಂಡುಹಿಡಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

7. ಪ್ರಶ್ನಾ ಕಾಗದಗಳು ಹೊರತಾಯಿ ಯಾವ ಕಾಗದಗಳನ್ನಾಗಲಿ ಪರೀಕ್ಷೆ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇದಿಸಲ್ಪಟ್ಟಿ ಈತ್ತಾರೆ. "ವಿಷ್ಟಕೆಟ್ಟು ಹೋದ ಕಾಗದ-ವೈರೆಗಳು" ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು.

ಎಲ್. ರೈಸ್,
ಎಡಿಕೇಷ್ನ ಸೆಕ್ರಟೇರಿ.